



ಸಂಗ್ರಹಾನುವಾದ: ಎಲ್.ಎಸ್. ಹೆಗಡೆ ಪುಟ್ಟನಮನೆ

ಚಿತ್ರ: ಬಿ.ಕೆ. ಸೋಮಶೇಖರ, ಬೆಂಗಳೂರು

**ಗುರುಕುಲದಲ್ಲಿ** ಓದುತ್ತಿದ್ದ ಒಬ್ಬ ಬಾಲಕನಿಗೆ ಸಂಸ್ಕೃತ ವ್ಯಾಕರಣದ ಧಾತುರೂಪಗಳು ಸರಿಯಾಗಿ ನೆನಪಾಗುತ್ತಿರಲಿಲ್ಲ. ಆಚಾರ್ಯರು ಅವನನ್ನು ಪ್ರತಿನಿತ್ಯ ಬಯ್ಯುತ್ತಿದ್ದರು, ಹೊಡೆಯುತ್ತಿದ್ದರು. ಒಂದು ದಿನ ಬಾಲಕನು ಛಡಿಯ ಪೆಟ್ಟಿಗಾಗಿ ಕೈಯನ್ನು ಮುಂದೆ ಚಾಚಿದನು. ಆಗ ಗುರುಗಳು ಹೇಳಿದರು, "ನೀನು ಹೇಗೆ ಓದುವಿ? ನಿನ್ನ ಕೈಯಲ್ಲಿ ವಿದ್ಯಾ ಪ್ರಾಪ್ತಿಯ ರೇಖೆಯೇ ಇಲ್ಲ." ಇದನ್ನು ಕೇಳಿ ನಿರಾಸೆಗೊಂಡ ಬಾಲಕನು ಪ್ರಶ್ನಿಸಿದನು, "ಗುರುಗಳೇ, ಸೃಷ್ಟಿಕರ್ತನು ಕೈಮೇಲೆ ವಿದ್ಯಾರೇಖೆಯನ್ನು ಎಲ್ಲಿ ಇಟ್ಟಿರುತ್ತಾನೆ?" ಗುರುಗಳು ಬಾಲಕನ ಕೈಮೇಲೆ ಬೆರಳಿಟ್ಟು ವಿದ್ಯಾರೇಖೆಯು ಇಲ್ಲಿರಬೇಕಿತ್ತು ಎಂದು ತೋರಿಸಿದರು. ನಂತರ ಅವರು ಉಳಿದ ವಿದ್ಯಾರ್ಥಿಗಳನ್ನು ಓದಿಸುವಲ್ಲಿ ಮಗ್ನರಾದರು. ಸ್ವಲ್ಪ ಸಮಯದ ನಂತರ ಅವರ ಗಮನ ಬಾಲಕನ ಕಡೆ ಹರಿಯಿತು. ಬಾಲಕನ ಅಂಗೈಯಿಂದ ರಕ್ತ ಸುರಿಯುತ್ತಿರುವುದನ್ನು ನೋಡಿ ಚಕಿತರಾಗಿ ಪ್ರಶ್ನಿಸಿದರು—"ಅರೆ, ಇಷ್ಟೊಂದು ರಕ್ತ ಹರಿಯುತ್ತಿದೆ! ಏನಾಯಿತು?" ಬಾಲಕನು ಹೇಳಿದ: "ನಾನು ನನ್ನ ಕೈಯಲ್ಲಿ ವಿದ್ಯಾರೇಖೆಯನ್ನು ಸ್ವತಃ ಮಾಡಿಕೊಂಡಿದ್ದೇನೆ. ಅದನ್ನು ಯಾವುದೋ ಕಾರಣದಿಂದ ಬ್ರಹ್ಮ ಬರೆದಿಲ್ಲದಿರಬಹುದು, ಅಥವಾ ಮರೆತಿರಬಹುದು."



ಬಾಲಕನ ಮುಗ್ಧತೆ ಮತ್ತು ಓದಿನಲ್ಲಿರುವ ದೃಢ ಇಚ್ಛಾಶಕ್ತಿಯನ್ನು ನೋಡಿ, ಆ ಬಾಲಕ ನಿಜಕ್ಕೂ ಮುಂದೆ ದೊಡ್ಡ ವಿದ್ವಾಂಸನಾಗುವನೆಂದು ಗುರುಗಳಿಗೆ ಗೊತ್ತಾಯಿತು.

ಆ ಬಾಲಕ ಯಾರು ಗೊತ್ತೇ? ಮುಂದೆ ಸಂಸ್ಕೃತದ ಪ್ರಥಮ ವ್ಯಾಕರಣವನ್ನು ಸೂತ್ರಗಳ ರೂಪದಲ್ಲಿ ನಿರೂಪಿಸಿದ ಪಾಣಿನಿ ಮಹರ್ಷಿ!! ✪